(ಆ) ರೂ. 7500/– ಗಳಿಗೆ ಮೇಲ್ಪಟ್ಟ ಹಾಗೂ ರೂ. 35000/– ಗಳವರೆಗಿನ ಮೊತ್ತದ ಬೆಳೆ ನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಟ ರೂ. 7500/– ಮತ್ತು ಗರಿಷ್ಟ ರೂ. 21250/–ಗಳು

(ಇ) ರೂ. 35000/– ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ, ಕನಿಷ್ಟ ರೂ. 21250/– ಮತ್ತು ಗರಿಷ್ಟ ರೂ.50000/–ಗಳು ದಯಾತ್ಮಕ ಧನ ಪಾವತಿಸಲಾಗುತ್ತಿದೆ.

ಈ) ವನ್ಯಜೀವಿ (ಸಂರಕ್ಷಣೆ) ಕಾಯ್ದೆ, 1972ರ ನಿಯಮ 34 ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರಿ ಆದೇಶ ಸಂಖ್ಯೆಃ ಅಪಜೀ/109/ಎಫ್‌ಎಪಿ/2014, ದಿನಾಂಕಃ 13.08.2014ರ ಪ್ರಕಾರ ಹೆಚ್ಚಿನ ಬೆಳೆ ಹಾನಿಯಾದ ಪ್ರಕರಣಗಳಿಗೆ ಕನಿಷ್ಟ ಮೊತ್ತ ರೂ.7500.00 ರಿಂದ ಗರಿಷ್ಟ ಮೊತ್ತ ರೂ.1,00,000.00 ದಯಾತ್ಮಕ ಧನವನ್ನು ಹೆಚ್ಚಿಸಲಾಗಿದ್ದು ಅದರಂತೆ ಪಾವತಿಸಲಾಗುತ್ತಿದೆ.

ಹುಲಿ ಸಂರಕ್ಷಿತ ಅರಣ್ಯ ಪ್ರದೇಶ

919(1221); ಶ್ರೀ ಅಶೋಕ್ ಆರ್. (ಪದ್ಮನಾಭ ನಗರ)

ಅ) ರಾಜ್ಯದಲ್ಲಿರುವ ಹುಲಿ ಸಂರಕ್ಷಿತ ಅರಣ್ಯ ಪ್ರದೇಶಗಳ್ಯಾವುವು; ಇವುಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆಯೇ; ಎಲ್ಲೆಲ್ಲಿ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ (ವಿವರ ಒದಗಿಸುವುದು);

ಆ) ಈ ನಿಟ್ಟಿನಲ್ಲಿ ಬಂಡೀಪುರ ಉದ್ಯಾನದಲ್ಲಿ ರಾತ್ರಿ ವಾಹನ ಸಂಚಾರ ನಿರ್ಬಂಧ ಸೇರಿದಂತೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಸದರಿ ಅರಣ್ಯ ಪ್ರದೇಶ ವ್ಯಾಪ್ತಿಯ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳಲಿಲ್ಲವೆಂಬ ಕಾರಣಕ್ಕೆ ಕಾಡಿಗೆ ಬೆಂಕಿ ಹಚ್ಚಿರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ;

ಈ) ಇದರಿಂದ ಕಾಡಿಗೆ ಉಂಟಾದ ನಷ್ಟವೆಷ್ಟು; ಎಷ್ಟು ಎಕರೆ ಪ್ರದೇಶದ ಎಷ್ಟು ಮರಗಳು ಭಸ್ಮವಾಗಿವೆ; ಕಿಚ್ಚಿಗೆ ಹಚ್ಚಿದ ಬೆಂಕಿ ನಂದಿಸಲು ತೆಗೆದುಕೊಂಡ ಕ್ರಮಗಳು ಹಾಗೂ ಇದಕ್ಕೆ ಖರ್ಚಾದ ಹಣವೆಷ್ಟು (ವಿವರ ಒದಗಿಸುವುದು);

ಉ) ಇಂತಹ ಅರಣ್ಯ ಉದ್ಯಾನಗಳು ಮತ್ತು ಪ್ರಾಣಿ ರಕ್ಷಣೆಗೆ ಮುಂದಾಗದೇ ಸರ್ಕಾರ ಕೇರಳ ಲಾಬಿಗೆ ಮಣಿದಿರುವುದು ನಿಜವೇ; ಇದಕ್ಕೆ ಕಾರಣವೇನು (ವಿವರ ಒದಗಿಸುವುದು)?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ಐದು ಹುಲಿ ಸಂರಕ್ಷಿತ ಪ್ರದೇಶಗಳಿವೆ.

1. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ನಾಗರಹೊಳೆ.
2. ಬಂಡೀಪುರ, ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ.
3. ಬಿಆರ್‌ಟಿ, ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ.
4. ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು.
5. ದಾಂಡೇಲಿ–ಅಣಶಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ.

ಹುಲಿ ಸಂರಕ್ಷಿತಪ್ರದೇಶಗಳ ರಕ್ಷಣೆಗಾಗಿ ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

- ವನ್ಯಪ್ರಾಣಿಗಳ ರಕ್ಷಣಾ ದೃಷ್ಟಿಯಿಂದ ವನ್ಯಪ್ರಾಣಿ ಕಳ್ಳಬೇಟೆ ತಡೆ ಶಿಬಿರಗಳನ್ನು ಸ್ಥಾಪನೆ ಮಾಡಿ ಪ್ರತಿ ದಿನ ಗಸ್ತು ಮಾಡಿ ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

- ಕಾಡಿನಲ್ಲಿ ಕೆರೆಗಳನ್ನು ನಿರ್ಮಾಣ ಮಾಡುವುದು, ಹಾಗೂ ದುರಸ್ಥಿ ಮಾಡುವುದು, ಚೆಕ್ ಡ್ಯಾಂ, ಕಾಸ್ವೆಗಳ ನಿರ್ಮಾಣದಿಂದ ವನ್ಯಪ್ರಾಣಿಗಳಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿದೆ.

- ಕಾಡಿಗೆ ಬೆಂಕಿ ಬೀಳದಂತೆ ಮುಂಜಾಗ್ರತಾ ಕ್ರಮವಾಗಿ ಬೆಂಕಿ ಲೈನ್‌ಗಳ ನಿರ್ಮಾಣ ಮಾಡಲಾಗಿರುತ್ತದೆ ಹಾಗೂ ಬೆಂಕಿ ವೇಳೆಯಲ್ಲಿ ಸ್ಥಳೀಯ ಜನರನ್ನು ನೇಮಕ ಮಾಡಿಕೊಂಡು ಬೆಂಕಿ ಬೀಳದಂತೆ ಕ್ರಮ ವಹಿಸಲಾಗಿದೆ.

- ಹುಲಿ ಸಂರಕ್ಷಿತ ಪ್ರದೇಶದ ಕಾಡಿನ ಒಳಗೆ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತಿದ್ದು ವಾಹನಗಳ ಸಂಚಾರ ಹೆಚ್ಚಾಗಿರುತ್ತದೆ ಇದರಿಂದ ವನ್ಯಪ್ರಾಣಿಗಳು ರಸ್ತೆ ದಾಟುವಾಗ ಅಪಘಾತ ಸಂಭವಿಸುವ ಸಾಧ್ಯತೆಗಳಿರುವುದರಿಂದ ಅಲ್ಲಲ್ಲಿ ರಸ್ತೆ ಡುಬ್ಬಗಳನ್ನು ನಿರ್ಮಿಸಲಾಗಿದೆ ಹಾಗೂ ಸೂಚನಾ ಫಲಕಗಳನ್ನು ನಿರ್ಮಿಸಲಾಗಿದೆ.

- ಈ ರಕ್ಷಣಾ ಕಾರ್ಯದ ಸಿಬ್ಬಂದಿಗಳಿಗೆ ಹಾಗೂ ಇಲಾಖಾ ಸಿಬ್ಬಂದಿಗಳಿಗೆ ವೈರ್‌ಲೆಸ್ ವಾಕಿ ಟಾಕಿ, ಶಸ್ತ್ರಾಸ್ತ್ರ, ಆಹಾರ ಸಾಮಗ್ರಿಗಳನ್ನು ಒದಗಿಸಿ ಪರಿಣಾಮಕಾರಿಯಾಗಿ ರಕ್ಷಣಾ ಕಾರ್ಯಕೈಗೊಳ್ಳಲಾಗುತ್ತಿದೆ.

- ನಾಗರಹೊಳೆ ಮತ್ತು ಬಂಡೀಪುರ ಹುಲಿ ಸಂರಕ್ಷಣಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು ವಿಶೇಷ ಹುಲಿ ಸಂರಕ್ಷಣಾ ದಳವನ್ನು (Special Tiger Protection Force) ತಂಡ ನೇಮಕ ಮಾಡಿ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಈ ಮೇಲಿನ ಕ್ರಮಗಳಲ್ಲದೆ ಬಂಡೀಪುರ ರಾಷ್ಟ್ರೀಯ ಉದ್ಯಾನವನ (ಹುಲಿ ಸಂರಕ್ಷಿತ ಪ್ರದೇಶ) ವ್ಯಾಪ್ತಿಯಲ್ಲಿ ರಾತ್ರಿ ವಾಹನ ಸಂಚಾರದ ನಿರ್ಬಂಧವನ್ನು ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರ ಆದೇಶ ಸಂಖ್ಯೆ ಎಂ.ಎ.ಜಿ(1) ಎಂ.ಎಲ್.ಜಿ 18/2009–10 ದಿನಾಂಕ 3–6–2009 ರ ಪ್ರಕಾರ ಹಾಗೂ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 26612/629/2009, ರಿಟ್ ಪಿಟಿಷನ್ ಸಂಖ್ಯೆ: 17498/2009 ಮತ್ತು ರಿಟ್ ಪಿಟಿಷನ್ ಸಂಖ್ಯೆ: 919/2010ರ ಪ್ರಕರಣಗಳಿಗೆ ಸಂಬಂಧಿಸಿದಂತೆ ದಿನಾಂಕ: 9/3/2010ರಲ್ಲಿ ಆದೇಶಿಸಿರುವಂತೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 212 ಮತ್ತು 67ರಲ್ಲಿ ರಾತ್ರಿ 9.00 ರಿಂದ ಬೆಳಿಗ್ಗೆ 6.00 ಗಂಟೆಯವರೆಗೆ ರಾತ್ರಿ ವಾಹನ ಸಂಚಾರವನ್ನು ನಿಷೇಧಿಸಲಾಗಿರುತ್ತದೆ. ಈ ರಸ್ತೆಗಳಲ್ಲಿ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ 32 ಸಾರಿಗೆ ಬಸ್ಸುಗಳನ್ನು ಮತ್ತು ತುರ್ತು ಪರಿಸ್ಥಿತಿಯಲ್ಲಿ ಆಂಬ್ಯುಲೆನ್ಸ್ ಮತ್ತು ಅಗ್ನಿ ಶಾಮಕ ದಳದ ವಾಹನಗಳನ್ನು ಮಾತ್ರ ಸಂಚರಿಸಲು ಅನುವು ಮಾಡಿಕೊಡಲಾಗಿದೆ.

ಇ) ಇಂತಹ ಯಾವುದೇ ಪ್ರಕರಣಗಳು ಬೆಳಕಿಗೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇದು ನಿಜವಲ್ಲ